ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 07-02-1976--ಪಾರ್ಟ್ - 2.

# *ಮಹಾರಥಿಯ ಹೊಸದೇನಲ್ಲ ಎಂಬ ಸ್ಥಿತಿ ಹಾಗೂ ವ್ಯರ್ಥದ ಖಾತೆಯ ಸಮಾಪ್ತಿ*

(महारथी की 'नथिंग-न्यू' की स्थिति और व्यर्थ के खाते की समाप्ति)

**ಬಾಪ್‌ದಾದಾರವರ ಸಹಯೋಗಿನಿ, ದಣಿವರಿಯದ ಸೇವಾಧಾರಿ, ವಿಶ್ವಕಲ್ಯಾಣಿ ದೀದಿಯವರೊಂದಿಗೆ ಮಿಲನ ಮಾಡುತ್ತಾ ತಂದೆ ಮಾತನಾಡಿರುವ ಮಹಾ ವಾಕ್ಯಗಳು.**

ಇದು ಮಹಾರಥಿಗಳ ಪುರುಷಾರ್ಥವಾಗಿದೆ ಎಂಬುದು ಮಹಾರಥಿಗಳ ಮಹಾನ್ ಸ್ಥಿತಿಯ ವಿಶೇಷ ಸಂಕೇತದಿಂದ ಸ್ಪಷ್ಟವಾಗಬೇಕು. ಅದು ಯಾವುದಾಗಿದೆ? ಒಂದಂತು ಮಹಾನ್ ಪುರುಷಾರ್ಥಿ ಅರ್ಥಾತ್ ಮಹಾರಥಿಗಳು, ಯಾವುದೇ ದೃಶ್ಯವನ್ನು ನೋಡುತ್ತೀರಿ ಅಥವಾ ತಿಳಿಯುತ್ತೀರಿ, ಅದು ಡ್ರಾಮಾದ ನಿಯಮದನುಸಾರವಾಗಿ ಅನೇಕ ಬಾರಿ ಆಗಿರುವುದೇ ಈಗ ಮತ್ತೆ ರಿಪೀಟ್ ಆಗುತ್ತಿದೆ, ಅದು ಹೊಸದೇನಲ್ಲ ಎಂದೆನಿಸುತ್ತದೆ. ಏಕೆ ಮತ್ತು ಏನು ಎಂಬ ಪ್ರಶ್ನೆಯು ಬರಲು ಯಾವುದೇ ಹೊಸಮಾತು ಎಂದು ಅನುಭವವಾಗುವುದಿಲ್ಲ ಮತ್ತು ಇನ್ನೊಂದು- ಇದು ಪ್ರತ್ಯಕ್ಷದಲ್ಲಿ, ಸ್ಮೃತಿಸ್ವರೂಪರದಲ್ಲಿ, ಅನೇಕಬಾರಿ ನೋಡಿರುವ ದೃಶ್ಯವನ್ನೇ ಈಗ ಕೇವಲ ನಿಮಿತ್ತಮಾತ್ರ ರಿಪೀಟ್ ಮಾಡುತ್ತಿದ್ದೇನೆಂದು ಅನುಭವವಾಗುತ್ತದೆ. ಹೊಸದಾಗಿ ಮಾಡುತ್ತಿಲ್ಲ ಆದರೆ ರಿಪೀಟ್ ಮಾಡುತ್ತಿದ್ದೇನೆ, ಸ್ಮೃತಿಯನ್ನೂ ತಂದುಕೊಳ್ಳಬೇಕಾಗುವುದಿಲ್ಲ. ಕಲ್ಪದ ಮೊದಲು ಏನಾಗಿತ್ತೋ, ಈಗಲೂ ಅದೇ ಆಗುತ್ತಿದೆ ಆದರೆ ಹೇಗೆ ಒಂದುಸೆಕೆಂಡಿನ ಮೊದಲು ಕಳೆದುಹೋಗಿರುವ ಮಾತು ಬಹಳ ಸ್ಪಷ್ಟರೂಪದಿಂದ ಸ್ಮೃತಿಯಲ್ಲಿರುತ್ತದೆಯೋ ಅದೇರೀತಿ ಕಲ್ಪದ ಮೊದಲಿನ ಕಳೆದುಹೋಗಿರುವ ದೃಶ್ಯವೂ ಸ್ಮೃತಿಯಲ್ಲಿರುತ್ತದೆ. ಒಂದು ಸೆಕೆಂಡಿಗೆ ಮೊದಲು ಕಳೆದುಹೋಗಿರುವ ದೃಶ್ಯವೂ ಸ್ಮೃತಿಯಲ್ಲಿರುತ್ತದೆ ಏಕೆಂದರೆ ಒಂದು ಸಾಕ್ಷಿಸ್ಥಿತಿ, ಇನ್ನೊಂದು ತ್ರಿಕಾಲದರ್ಶಿ- ಇವೆರಡೂ ಸ್ಥಿತಿಯು ಮಹಾರಥಿಗಳಾಗಿರುವ ಕಾರಣದಿಂದ ಕಲ್ಪದ ಮೊದಲಿನ ಸ್ಮೃತಿಯು ಸಂಪೂರ್ಣವಾಗಿ ಪ್ರಫುಲ್ಲಿತರಾಗಿರುತ್ತಾರೆ ಆದ್ದರಿಂದ ಹೊಸದೇನಲ್ಲ. ಎಂದೆನಿಸುತ್ತದೆ. ಮತ್ತೊಂದು ಏನಾಗಿರುತ್ತದೆ? ಯಾವುದೆಷ್ಟಾದರೂ ವಿಕರಾಳ ರೂಪದ ಪರಿಸ್ಥಿತಿಯಿರಬಹುದು ಅಥವಾ ದೊಡ್ಡರೂಪದ ಸಮಸ್ಯೆಯಿರಬಹುದು ಆದರೆ ತಮ್ಮ ಸ್ಥಿತಿಯು ಶ್ರೇಷ್ಠವಾಗಿರುವುದರಿಂದ ಆ ಪರಿಸ್ಥಿತಿಯು ಖಂಡಿತವಾಗಿಯೂ ಚಿಕ್ಕದೆನಿಸುತ್ತದೆ. ದೊಡ್ಡಮಾತಾಗಿದೆ ಎಂದು ಅನುಭವವಾಗುವುದಿಲ್ಲ ಮತ್ತು ವಿಕರಾಳವೆಂದು ಕೂಡ ಅನುಭವವಾಗುವುದಿಲ್ಲ. ಹೇಗೆ ಎತ್ತರವಾದ ಬೆಟ್ಟದ ಮೇಲೆ ನಿಂತು ಕೆಳಗಿನ ಯಾವುದೇ ವಸ್ತುವನ್ನು ನೋಡಿದಾಗ ದೊಡ್ಡ ವಸ್ತು ಸಹ ಚಿಕ್ಕದಾಗಿದೆಯೆಂದು ಕಾಣಿಸುತ್ತದೆಯಲ್ಲವೆ. ಅತಿದೊಡ್ಡ ಕಾರ್ಖಾನೆಯೂ ಸಹ ಒಂದು ಮಾಡಲ್‌ನ ರೂಪದಿಂದ ಕಾಣಿಸುತ್ತದೆ. ಇದೇರೀತಿ ಮಹಾರಥಿಗಳ ಮಹಾನ್ ಪುರುಷಾರ್ಥದ ಮುಂದೆ ದೊಡ್ಡ ಮಾತಾಗಿದೆಯೆಂದು ಅನುಭವವಾಗುವುದಿಲ್ಲ. ಅಂದಮೇಲೆ ಮಹಾವೀರ ಅರ್ಥಾತ್ ಮಹಾರಥಿಯ ಮಹಾನ್ ಪುರುಷಾರ್ಥದ ಚಿಹ್ನೆಗಳು ಇವೆರಡಾಗಿವೆ, ಅದನ್ನು ಮತ್ತೊಂದು ಶಬ್ದದಲ್ಲಿ ಹೇಳಲಾಗುತ್ತದೆ, ಶೂಲವು ಮುಳ್ಳಿನ ಅನುಭವವಾಗುವುದು. ಇಂತಹ ಮಹಾವೀರರ ಮುಖದಿಂದ ಏನಾಗುವಂತಹ ಫಲಿತಾಂಶವಿರುತ್ತದೆ ಅರ್ಥಾತ್ ಏನಾಗುವುದಿದೆಯೋ ಆ ಶಬ್ದಗಳು ಸದಾ ಬಾಯಿಂದ ಬರುತ್ತಿರುತ್ತದೆ. ಅದು ಮೊದಲಿನಿಂದಲೇ ಮಾಡಲ್ಪಟ್ಟಿರುವುದಾಗಿರುತ್ತದೆ. ಇವರಿಗೇ ಸಿದ್ಧಿಸ್ವರೂಪರೆಂದು ಹೇಳಲಾಗುತ್ತದೆ. ಯಾವ ಮಾತುಗಳು ಹೊರಬರುತ್ತವೆ, ಯಾವ ಕರ್ಮವಾಗುತ್ತದೆ ಅದು ಸಿದ್ಧವಾಗುವಂತದ್ದಾಗಿರುತ್ತದೆ, ವ್ಯರ್ಥವಾಗುವುದಿಲ್ಲ. ಮಹಾರಥಿಯ ಚಿಹ್ನೆಯಾಗಿದೆ- ವ್ಯರ್ಥದ ಖಾತೆಯಂತೂ ಸಮಾಪ್ತಿಯಾಗಿಯೇ ಆಗುತ್ತದೆ ಆದರೆ ವ್ಯರ್ಥದ ಖಾತೆಯೂ ಸಮಾಪ್ತಿಯಾಗಿರಬೇಕು. ಮಾಸ್ಟರ್ ಸರ್ವಶಕ್ತಿವಂತರಲ್ಲವೇ? ಅಂದಮೇಲೆ ಮಾಸ್ಟರ್ ಸರ್ವಶಕ್ತಿವಂತನ ಸ್ಥಿತಿಯು ಪ್ರತ್ಯಕ್ಷಸ್ವರೂಪದ ವಿಕರ್ಮಗಳ ಖಾತೆಯ ಜೊತೆಜೊತೆ ವ್ಯರ್ಥದ ಖಾತೆಯೂ ಸಮಾಪ್ತಿ ಮಾಡುತ್ತದೆ. ಇದು ಮಹಾರಥಿಗಳ ಪುರುಷಾರ್ಥದ ಚಿಹ್ನೆಯಾಗಿದೆ.

ದೃಷ್ಟಿಯಿಂದ ಪರಿವರ್ತನೆ ಮಾಡುವ ಸೇವೆಯನ್ನು ಪ್ರಾರಂಭ ಮಾಡಿದ್ದೀರಾ? ಒಂದು ಮಹಾದಾನಿಯಾಗುವುದು, ಇನ್ನೊಂದು ವರದಾನಿಯಾಗುವುದು ಮತ್ತು ಮೂರನೆಯದು ವಿಶ್ವಕಲ್ಯಾಣಿ ಆಗುವುದು. ಅಂದಮೇಲೆ ಈ ಮೂರೂ ವಿಶೇಷತೆಗಳು ಒಬ್ಬರಲ್ಲಿಯೇ ಇದೆಯೇ ಅಥವಾ ಕೆಲವು ವಿಶೇಷತೆಗಳು ಕೆಲವರಲ್ಲಿದೆ ಮತ್ತು ಕೆಲವು ಕೆಲವರಲ್ಲಿದೆಯೇ? ಕೆಲವರದು ವರದಾನಿ ರೂಪದಲ್ಲಿ ಪೂಜೆಯಾಗುತ್ತದೆ, ಕೆಲವರದು ವಿಶ್ವಕಲ್ಯಾಣಿಯ ರೂಪದಲ್ಲಿ ಪೂಜೆಯಾಗುತ್ತದೆ. ಪೂಜೆಯಲ್ಲಿ ಅಥವಾ ಗಾಯನದಲ್ಲಿಯೂ ವ್ಯತ್ಯಾಸವಿದೆ – ಏಕೆ? ಮೂರರಲ್ಲಿಯೂ ಆಗುತ್ತೀರಿ ಆದರೆ ಪರ್ಸೆಂಟೇಜ್‌ನಲ್ಲಿ ವ್ಯತ್ಯಾಸವಾಗುತ್ತದೆ. ಕೆಲವರಲ್ಲಿ ಕೆಲವು ಮಾತುಗಳ, ಮತ್ತೆ ಕೆಲವರಲ್ಲಿ ಕೆಲವು ಮಾತಿನ ಪರ್ಸೆಂಟೇಜ್ ಕಡಿಮೆ ಅಥವಾ ಹೆಚ್ಚಾಗಿರುತ್ತದೆ.

ಒಂದಾಗಿದೆ - ಕರ್ಮದ ಗತಿ, ಇನ್ನೊಂದು - ಪ್ರಾಲಬ್ಧದ ಗತಿ ಮತ್ತು ಮೂರನೆಯದು ಗಾಯನ ಮತ್ತು ಪೂಜೆಯ ಗತಿ. ಹೇಗೆ ಕರ್ಮದ ಗತಿಯು ಗುಹ್ಯವಾಗಿದೆಯೋ ಹಾಗೆಯೇ ಇವೆರಡರ ಗತಿಯೂ ಗುಹ್ಯವಾಗಿದೆ. ಈಗ ಪ್ರಾಲಬ್ಧದ ಸಾಕ್ಷಾತ್ಕಾರವೂ ಸಹ ಪ್ರತ್ಯಕ್ಷದಲ್ಲಿ ಆಗಬೇಕಾಗಿದೆಯಲ್ಲವೆ. ಯಾರು ಏನಾಗುವರು ಮತ್ತು ಏಕೆ ಆಗುವರು. ಯಾವುದರ ಆಧಾರದಿಂದ ಆಗುವರು? ಇದೆಲ್ಲವೂ ಸ್ಪಷ್ಟವಾಗುತ್ತದೆ. ಬಯಸದಿದ್ದರೂ, ಯೋಚಿಸದಿದ್ದರೂ ಅವರ ಕರ್ಮ, ಸೇವೆ, ಚಲನೆ, ಸ್ಥಿತಿ, ಸಂಪರ್ಕ ಹಾಗೂ ಸಂಬಂಧವು ತಾನಾಗಿಯೇ ಆಗುತ್ತಿರುತ್ತದೆ. ಇದರಿಂದ ಇವರು ಯಾರು, ಏನಾಗುವವರಿದ್ದಾರೆ ಎಂದು ತಿಳಿದುಕೊಳ್ಳಬಹುದು. ಚಲನೆ ಅರ್ಥಾತ್ ಅವರ ಕರ್ಮವೇ ದರ್ಪಣವಾಗಿಬಿಡುತ್ತದೆ. ಕರ್ಮದಲ್ಲಿ ಮತ್ತು ದರ್ಪಣದಲ್ಲಿ ಪ್ರತಿಯೊಬ್ಬರದೂ ಸ್ಪಷ್ಟ ಸಾಕ್ಷಾತ್ಕಾರವಾಗುತ್ತಿರುತ್ತದೆ. ಒಳ್ಳೆಯದು- ಓಂಶಾಂತಿ.

ಅವ್ಯಕ್ತ ಮುರಳಿ 07-02-1976-- ಪಾರ್ಟ್ -2

***ಮಹಾರಥಿಯ ಹೊಸದೇನಲ್ಲ ಎಂಬ ಸ್ಥಿತಿ ಹಾಗೂ ವ್ಯರ್ಥದ ಖಾತೆಯ ಸಮಾಪ್ತಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಾಕ್ಷಿ ಸ್ಥಿತಿಯಲ್ಲಿ ತ್ರಿಕಾಲ ದರ್ಶಿಯಾಗಿದ್ದು ವ್ಯರ್ಥ ಖಾತೆಯನ್ನು ಸಮಾಪ್ತಿ ಮಾಡಿಕೊಂಡಿರುವ ಮಹಾರಥಿ.

2. ನಾನು ಮಹಾದಾನಿ ವರದಾನಿ ಮತ್ತು ವಿಶ್ವಕಲ್ಯಾಣಕಾರಿ.